**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆಃ 59/2019**

| | | |
|---|---|---|
| **ಹೆಸರು** | ಕುಮಾರ | ಚಾಸಾ-3 |
| **ತಂದೆಯ ಹೆಸರು** | ದೇವರಾಜೇಗೌಡ | |
| **ಉದ್ಯೋಗ** | ವ್ಯವಸಾಯ | ಪ್ರಾಸಾ-4 |
| **ವಾಸ ಸ್ಥಳ** | ನೈಗೆರೆ ಗ್ರಾಮ | |
| **ದಿನಾಂಕಃ 22.08.2024** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>**

ಆರೋಪಿಗಳ ಪರಿಚಯ ನನಗೆ ಇರುವುದಿಲ್ಲ. ಚಾಸಾ 1 ರವರ ಪರಿಚಯ ನನಗೆ ಇರುತ್ತದೆ. ಆರೋಪಿಗಳು ಮತ್ತು ಚಾಸಾ1 ಹೊಡೆದಾಡಿರುತ್ತಾರೆ. ಆ ಸಲುವಾಗಿ ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದು ದಾಖಲಾತಿಗೆ ಸಹಿ ಹಾಕಲು ಹೇಳಿದರು, ನಾನು ಸಹಿ ಹಾಕಿರುತ್ತೇನೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

1) ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಸಹಿಯನ್ನು ನಿಪಿ3(ಸಿ) ಎಂದು ಗುರುತಿಸಲಾಯಿತು.

ನಿಪಿ3(ಸಿ) ರಲ್ಲಿರುವ ಸಹಿಯನ್ನು ನಮ್ಮ ಊರಿನಲ್ಲಿ ಹಾಕಿರುತ್ತೇನೆ. ಸದರಿ ಸಹಿಯನ್ನು ಸುಮಾರು 3 - 4 ವರ್ಷಗಳ ಹಿಂದೆ ಮಧ್ಯಾಹ್ನ 12.30 ಮೇಲೆ ಹಾಕಿರುತ್ತೇನೆ. ಆ ದಿನ ಸದರಿ ದಾಖಲಾತಿಗೆ ನನ್ನೊಂದಿಗೆ ಬೇರೆ ಯಾರು ಸಹಿ ಹಾಕಿರುತ್ತಾರೆ ಎಂಬುದವರ ಮಾಹಿತಿ ನನಗೆ ಇರುವುದಿಲ್ಲ.

1) ಕೃತ್ಯ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಂದು ಹಾಕಿರುತ್ತೇನೆ ಎಂಬುದರ ಮಾಹಿತಿ ನನಗೆ ಇರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

<u>**ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.**</u>

ದಿನಾಂಕ 06.11.2018 ರಂದು ಮಧ್ಯಾಹ್ನ 2 ಗಂಟೆಗೆ ನಾನು ನಮ್ಮ ಊರಿನ ಈರೇಗೌಡರ ಮನೆಯ ಮುಂದಿರುವ ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ಊರಿನ ಈರೇಗೌಡರು ತಮ್ಮ ಕುಟುಂಬದೊಂದಿಗೆ ಗೊರೂರು ಹೆಚ್.ಆರ್.ಪಿ ವಸತಿಗೃಹದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ದಿನಾಂಕ 06.11.2018 ರಂದು ಮಧ್ಯಾಹ್ನ 2.00 ಗಂಟೆಗೆ ದೀಪಾವಳಿ ಹಬ್ಬದ ಪ್ರಯುಕ್ತ ಈರೇಗೌಡರು ನಮ್ಮ ಊರಿಗೆ ಬಂದಿದ್ದರು ಎಂದರೆ ಸರಿ. ನಂತರ ಈರೇಗೌಡರು ತನ್ನ ಹೆಂಡತಿ ಯಾದ ರೇವಮ್ಮ ಮತ್ತು ಮಗ ದೇವು ರವರನ್ನು ಬಿಟ್ಟು ಅರಕಲಗೂಡಿಗೆ ಕೆಲಸದ ಮೇರೆಗೆ ಹೋದರು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಆ ದಿನ ಈರೇಗೌಡರ ಮನೆಯ ಮುಂದಿರುವ ವಿದ್ಯುತ್ ಕಂಬಕ್ಕೆ ಬಲ್ಪ್ ಹಾಕಿರಲಿಲ್ಲ ಎಂಬ ವಿಚಾರಕ್ಕೆ ರೇವಮ್ಮ ಅವರ ಗ್ರಾಮದ ಮೆಂಬರ್ ರವರನ್ನು ಏಕೆ ನಮ್ಮ ಮನಯ ವಿದ್ಯುತ್ ಕಂಬಕ್ಕೆ ಬಲ್ಪ ಹಾಕಿಲ್ಲ ಎಂದು ಹೇಳುತ್ತಿದ್ದಾಗ1 ರಿಂದ 4ರಲ್ಲಿರುವ ಆರೋಪಿಗಳು ಚಾಸಾ 1 ಮತ್ತು ಈರೇಗೌಡರ ಮೇಲೆ ಹಳೇ ದ್ವೇಷದಿಂದ ಅಂದರೆ ಜಮೀನಿನ ವಿಚಾರದಲ್ಲಿ ಇರುವ ದ್ವೇಷದಿಂದ ಅವರ ನಡುವೆ ಮನಸ್ತಾಪ ಇದ್ದು ಚಾಸಾ 1 ರವರಿಗೆ 1 ರಿಂದ 4 ನೇ ಆರೋಪಿಗಳು ಕೆಬ್ಬ ಭಾಷೆಯಲ್ಲಿ ಬೈದು ವಿದ್ಯುತ್ ಬಿಲ್ ಯಾರು ಕಟ್ಟುತ್ತಾರೆ ಎಂದು ಜೋರಾಗಿ ಮಾತಾಡಿ ಈರೇಗೌಡ ಮನೆಗೆ ನುಗ್ಗಿ 1ನೇಆರೋಪಿಯು ದೊಣ್ಣೆಯಿಂದ ಚಾಸಾ 1 ರವರ ಬಲರಟ್ಟೆಗೆ ಹೊಡೆದು ಊತಗಾಯಪಡಿಸಿ ಆಕೆಗೆ ಮಾನಕ್ಕೆ ಕುಂದುಂಟು ಆಗುವಂತೆ ನಡೆದುಕೊಂಡಿರುತ್ತಾರೆ, 2ನೇ ಆರೋಪಿಯು ಚಾಸಾ 1 ರವರಿಗೆ ಕಾಲಿನಿಂದ ಹೊಟ್ಟೆಗೆ ಒದ್ದಿರುತ್ತಾರೆ, 3ನೇ ಆರೋಪಿಯು ಚಾಸಾ1 ರವರಿಗೆ ಕೈಯಿಂದ ಕಪಾಲಕ್ಕೆ, ಮೈಕೈಗೆ ಹೊಡೆದಿರುತ್ತಾರೆ ಮತ್ತು 4ನೇ ಆರೋಪಿಯು ಕಾಲಿನಿಂದ ಚಾಸಾ 1 ರವರ ಹೊಟ್ಟೆಗೆ ಕಾಲಿನಿಂದ ಒದ್ದು ರಕ್ತಸ್ರಾವವಾಗುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ದೇವು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು 09.11.2018 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿರುವ ಸಹಿಯನ್ನು ನಾನು ನೈಗೆರೆಕೊಪ್ಪಲು ಗ್ರಾಮದಲ್ಲಿ ಹಾಕಿರುತ್ತೇನೆ ಎಂದರೆ ಸರಿ ಮತ್ತು ನನ್ನೊಂದಿಗೆ ಆ ದಿನ ಚಾಸಾ 1 ಮತ್ತು 5 ರವರೂ ಸಹ ಸಹಿ ಹಾಕಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ನಿಪಿ 2(ಸಿ) ರಲ್ಲಿರುವ ಸಹಿ ಯನ್ನು ನಾನು ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. 5ನೇ ಆರೋಪಿಯು ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು ಅದರ ಸಲುವಾಗಿ ಪೊಲೀಸರು ಮಹಜರ್ ಮಾಡಿದಾಗ ಸದರಿ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗೆ ನನ್ನೊಂದಿಗೆ ಚಾಸಾ 1 ಮತ್ತು 5 ರವರೂ ಸಹ ಸಹಿ ಹಾಕಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಎಂ ಓ1 ನ್ನು ಪೊಲೀಸರು ನನ್ನ ಸಮಕ್ಷಮ ದಿನಾಂಕ 09.11.2018 ರಂದು ಅಮಾನತುಪಡಿಸಿದರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರವು ತಿಳಿದಿದ್ದರು ಆರೋಪಿಗೆ

ಸಹಾಯ ಮಾಡುವ ದುರುದ್ದೇಶದಿಂದ ಆರೋಪಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ ಎನ್ ಆರ್ ವಕೀಲರಿಂದಃ**

ಪೊಲೀಸರು ಮಹಜರ್ ಸಮಯದಲ್ಲಿ ನಿಪಿ 2 ಮತ್ತು 3 ರಲ್ಲಿ ಬರೆದಿರುವ ಸಂಗತಿ ಮಾಹಿತಿ ನನಗೆ ಇರುವುದಿಲ್ಲ. ಪೊಲೀಸರು ಘಟನೆಯಾಗಿದೆ ಎಂದು ಹೇಳುತ್ತಿರುವ ಸ್ಥಳಕ್ಕೆ ಬಂದಿರುವುದಿಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ಸಿ ರಲ್ಲಿರುವ ಸಹಿಯನ್ನು ನಾನು ನೈಗೆರೆ ಗ್ರಾಮದಲ್ಲಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಊರಿಗೆ ಬಂದು ಮಹಜರ್ ಮಾಡಿರುವುದಿಲ್ಲ ಮತ್ತು ನಾನು ಮಹಜರ್ ಗೆ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**